**ದಿನಾಂಕಃ 02.04.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ವಿ. ವಕೀಲರಿಂದಃ**

ತಿಮ್ಮರಾಯಗೌಡರವರ ಮಗ ಪಟೇಲ್ ಮುನಿಸುಬ್ಬೇಗೌಡ ದಾವಾ ಐಟಂ ನಂ.1 ಅನ್ನು ಪ್ರತಿವಾದಿ 1 ಮತ್ತು 2 ರವರ ತಂದೆಗೆ ಮಾರಾಟ ಮಾಡುವಾಗ ಸ.ನಂ. 87 ರ ಬದಲಾಗಿ ಅದು ಸ.ನಂ.102 ಎಂದು ನಮೂದು ಮಾಡಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿ 1 ಮತ್ತು 2 ರವರ ತಂದೆ ಹೊಟ್ಟೆಪ್ಪ ಅವಿದ್ಯಾವಂತರಾಗಿದ್ದು, ಅವರಿಗೆ ಸ.ನಂ. 87 ರ ಬದಲಾಗಿ ಸ.ನಂ. 102 ಎಂದು ಕ್ರಯ ಪತ್ರದಲ್ಲಿ ನಮೂದಾಗಿರುವುದು ಅವರ ಗಮನಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1955 ರಲ್ಲಿ ದಾವಾ ಐಟಂ ನಂ.1 ಅನ್ನು ಪ್ರತಿವಾದಿ 1 ಮತ್ತು 2 ರವರ ತಂದೆ ಹೊಟ್ಟೆಪ್ಪರವರಿಗೆ ಮಾರಾಟ ಮಾಡಿದ ನಂತರ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಹೊಟ್ಟೆಪ್ಪರವರು ತೀರಿ ಹೋದ ನಂತರ ಅವರ ಮಕ್ಕಳಾದ ಪ್ರತಿವಾದಿ 1 ಮತ್ತು 2 ರವರು ದಾವಾ ಐಟಂ ನಂ.1 ರಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಕುರಿತು ಹಳೆಯ ಪಹಣಿಗಳಲ್ಲಿ ಪ್ರತಿವಾದಿ 1 ಮತ್ತು 2 ರವರ ಹೆಸರು ಸ್ವಾಧೀನ ಕಾಲಂನಲ್ಲಿ ಇರುತ್ತವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅದು ಸೃಷ್ಟಿ ಪಡಿಸಿದ ದಾಖಲೆ ಎನ್ನುತ್ತಾರೆ. ದಾವಾ ಐಟಂ ನಂ.1 ರ ಕುರಿತು ಸೃಷ್ಟಿಯಾದ ವಿಚಾರ ಈ ದಾವೆಯನ್ನು ಸಲ್ಲಿಸಿದ ನಂತರ ನಮಗೆ ಗೊತ್ತಾಗಿರುತ್ತದೆ. ದಾವಾ ಐಟಂ ನಂ.1 ರ ಪಹಣಿ ಪತ್ರಿಕೆ ಸೃಷ್ಟಿಯಾದ ಬಗ್ಗೆ ನಾನು ಯಾವುದೇ ಕಾನೂನು ಕ್ರಮವನ್ನು ಕೈಗೊಂಡಿರುವುದಿಲ್ಲ. ದಾವಾ ಐಟಂ ನಂ.1 ರ ಕುರಿತು ಪಹಣಿ ಪತ್ರಿಕೆ ಸೃಷಿಯಾಗಿರುವ ಬಗ್ಗೆ ನಾನು ವಾದಪತ್ರದಲ್ಲಿ ಹೇಳಿರುತ್ತೇನೆ. ದಾವಾ ಐಟಂ ನಂ.1 ರ ಹಳೆ ಕೈ ಬರಹದ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದಂತೆ ಹಳೆ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿ 1 ಮತ್ತು 2 ರವರ ಹೆಸರುಗಳು ಸ್ವಾಧೀನ ಕಾಲಂನಲ್ಲಿ ಬರುತ್ತಿದ್ದು, ಸದರಿ ಪಹಣಿ ಪತ್ರಿಕೆಗಳನ್ನು ನಾನು

ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ವಾದಿಯರು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 2 ರ ವಿಸ್ತೀರ್ಣ 2 ಗುಂಟೆಯಾಗಿರುತ್ತದೆ. ದಾವಾ ಐಟಂ ನಂ.2 ಪೂರ್ವ ದಿಕ್ಕಿಗೆ ರಸ್ತೆ, ಪಶ್ಚಿಮಕ್ಕೆ ಮಲ್ಲೇಶ್‌ರವರ ಜಮೀನು, ಉತ್ತರಕ್ಕೆ ದೊಡ್ಡಗುರಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಗೋವಿಂದಪ್ಪರವರ ಜಮೀನು ಇರುತ್ತದೆ. ದಾವಾ ಐಟಂ ನಂ.2 ರ ಚಕ್ಕುಬಂಧಿ ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ದಾವಾ ಐಟಂ ನಂ.2 ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶವೃಕ್ಷ, ಪಹಣಿ, ಪಟ್ಟಾ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.2 ಕ್ಕೆ ನಾವು ಮಾಲೀಕ ಮತ್ತು ಸ್ವಾಧೀನದಾರ ಅಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ನೀಡಿರುವ ದಾವಾ ಐಟಂ.ನಂ.2 ರ ಚಕ್ಕುಬಂಧಿ ಸ.ನಂ.58/5 ಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂ. 58/5 ರ ಪಹಣಿ ಪತ್ರಿಕೆ 2 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಸ.ನಂ. 58/13 ರ ಚಕ್ಕುಬಂಧಿ ದ- ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಚಕ್ಕುಬಂಧಿ ತೋರಿಸಿರುವ ಸ್ವತ್ತಿನಲ್ಲಿ ಪ್ರತಿವಾದಿ 2 ಮತ್ತು ಅವರ ಕುಟುಂಬದ ಸದಸ್ಯರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಐಟಂ ನಂ.2 ಕ್ಕೆ ಸ.ನಂ. 58/5 ರ ಚಕ್ಕುಬಂಧಿಯನ್ನು ತೋರಿಸಿ, ಅದು ಸ.ನಂ. 58/13 ಎಂದು ತಪ್ಪು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ಮೂಲತಃ ನಮ್ಮ ತಾತ ಸುಬ್ಬೇಗೌಡ ಸನ್ ಆಫ್ ತಿಮ್ಮರಾಯಗೌಡರವರಿಗೆ ಸೇರಿರುವ ಆಸ್ತಿಯಾಗಿರುತ್ತದೆ. ನನ್ನ ತಾತನ ಹೆಸರು ಸುಬ್ಬೇಗೌಡ

ತಂದೆ ನಂಜಪ್ಪ, ಆದರೆ ಅದು ಸುಬ್ಬೇಗೌಡ ತಂದೆ ತಿಮ್ಮರಾಯಗೌಡ ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ನನ್ನ ತಾತನ ಹೆಸರು ಸುಬ್ಬೇಗೌಡ ತಂದೆ ತಿಮ್ಮರಾಯಗೌಡ ಎಂದು ಹೇಳಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ನ್ಯಾಯಾಲಯದ ಮುಂದೆ ಸುಬ್ಬೇಗೌಡ ತಂದೆ ತಿಮ್ಮರಾಯಗೌಡರ ವಾರಸುದಾರರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಸುಬ್ಬೇಗೌಡ ತಂದೆ ನಂಜಪ್ಪ ಆಗಿರುತ್ತಾರೆ, ಆದರೆ ಅದು ಸುಬ್ಬೇಗೌಡ ತಂದೆ ತಿಮ್ಮರಾಯಗೌಡ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ಸ.ನಂ. 58 ರಲ್ಲಿ ಒಟ್ಟು 14 ಪೋಡ್ ಆಗಿರುತ್ತವೆ ಎಂದರೆ ಸರಿ. ಸದರಿ ಪೋಡ್ ಆಗಿರುವ ಸ.ನಂ. 58 ಕ್ಕೆ ಪ್ರತ್ಯೇಕ ನಕ್ಷೆ ಸಿಗುತ್ತವೆ ಎಂದರೆ ಸರಿ. ಸರ್ವೆ ದಾಖಲೆಗಳ ಮುಖಾಂತರ ಸ.ನಂ. 58/13 ಕ್ಕೆ ಪ್ರತ್ಯೇಕ ದಾಖಲೆ ಚಕ್ಕುಬಂಧಿಗೆ ಸಂಬಂಧಿಸಿದಂತೆ ಸಿಗುತ್ತದೆ ಎಂದರೆ ಸರಿ. ಸ.ನಂ. 58/13 ರ ಪೂರ್ವಕ್ಕೆ ಯಾವ ಸ.ನಂ. ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಸ್ತೆ ಬರುತ್ತದೆ ಎಂದು ಹೇಳುತ್ತಾರೆ. ಸ.ನಂ.58/13 ರ ಪೂರ್ವಕ್ಕೆ ರಸ್ತೆ ಬರುವುದಿಲ್ಲ, ಸ.ನಂ. 62 ಬರುತ್ತದೆ ಎಂದರೆ ಸರಿಯಲ್ಲ. ಸ.ನಂ. 58/13 ರ ಪಶ್ಚಿಮಕ್ಕೆ ಸ.ನಂ. 58/12 ಬರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂ. 58/12 ಅಶ್ವಥಮ್ಮ ವೈಫ್ ಆಫ್ ಭೈರಪ್ಪರವರ ಹೆಸರಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 58/13 ರ ಉತ್ತರಕ್ಕೆ ಸ.ನಂ. 58/10 ಬರುತ್ತದೆ ಎಂದರೆ ಗೊತ್ತಿಲ್ಲ. ಸ.ನಂ. 58/10 ಗೋಪಾಲಪ್ಪ ಬಿನ್ ಭೈರಪ್ಪರವರ ಹೆಸರಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 58/13 ರ ದಕ್ಷಿಣಕ್ಕೆ ಆಲಂಬಾಡಿಯಿಂದ ಚಿಕ್ಕತಿರುಪತಿಗೆ ಹೋಗುವ ರಸ್ತೆ ಬರುತ್ತದೆ ಎಂದರೆ ಸುಳ್ಳು. ದಾವಾ ಐಟಂ ನಂ.2 ಸ.ನಂ. 58/13 ರ ಸರ್ವೆ

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ-12 ಮತ್ತು ನಿಪಿಃ 18 ರಂತೆ ಈ ದಾವೆ ಚಾಲ್ತಿಯಲ್ಲಿರುವಾಗ ನಾಡಕಚೇರಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆದ ಆದೇಶಗಳಾಗಿರುತ್ತವೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆದ ಆದೇಶ ಈ ದಾವೆಯ ಅಂತಿಮ ತೀರ್ಪಿಗೆ ಒಳಪಟ್ಟ ಆದೇಶವಾಗಿರುತ್ತದೆ ಎಂದರೆ ಸುಳ್ಳು.

ನಾನು ನ್ಯಾಯಾಲಯಕ್ಕೆ ನಿಪಿಃ 13 ರಿಂದ 16 ಭಾವಚಿತ್ರಗಳನ್ನು ಪ್ರತಿವಾದಿಯರು ದಾವಾ ಐಟಂ ನಂ.1 ರಲ್ಲಿ ಇರದೇ ಇರುವ ಸಮಯದಲ್ಲಿ ತೆಗೆಸಿಕೊಂಡ ಭಾವಚಿತ್ರಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ವಾದಿಯರು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರವರ ವಾರಸುದಾರರು ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ವಂಶವೃಕ್ಷ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ನಾನು ನಿಪಿಃ 9 ಅನ್ನು ಸೃಷ್ಟಿಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ 10 ಮತ್ತು ನಿಪಿಃ 11 ಅನ್ನು ಈ ದಾವೆ ಚಾಲ್ತಿಯಲ್ಲಿರುವಾಗ ಸೃಷ್ಟಿಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳ ಮಾಲೀಕ ಮತ್ತು ಸ್ವಾಧೀನದಾರ ಅಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರವರ ವಾರಸುದಾರರು ಅಲ್ಲ, ನಾವು ಸುಬ್ಬೇಗೌಡ ಬಿನ್ ನಂಜಪ್ಪರವರ ವಾರಸುದಾರರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ಮುಂಚೆ ಪ್ರತಿವಾದಿ 1 ಮತ್ತು 2 ರವರ ತಂದೆ ಹೊಟ್ಟೆಪ್ಪ ಸ್ವಾಧೀನದಲ್ಲಿದ್ದು, ಅವರ ಮರಣದ ನಂತರ ಅವರ ಮಕ್ಕಳಾದ ಪ್ರತಿವಾದಿ 1

ಮತ್ತು 2 ರವರು ದಾವಾ ಐಟಂ ನಂ.1 ರಲ್ಲಿ 1955 ರಿಂದ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ದಾವಾ ಐಟಂ ನಂ.2 ರ ಸರಿಯಾದ ಚಕ್ಕುಬಂಧಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದೇ ಇದ್ದರೂ ಸಹ, ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.

ಸಹಿ/-

**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**